## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 19 ನೇ ಆಗಸ್ಟ್ ಮಾಹೆ 2023 ನೇ ಇಸವಿ.

ಸಿ.ಸಿ. ನಂಃ 938/2017

ಗಣೇಶ್ ಶೆಟ್ಟಿ
ಪ್ರಾಯಃ 57 ವರ್ಷ,
ತಂದೆಃ ಶಿವಣ್ಣ ಶೆಟ್ಟಿ
ವಾಸಃ ಕೊದಂಬರಬೆಟ್ಟು ಮನೆ,
ರಂಗನಪಲ್ಕೆ ಅಂಚೆ, ಕೌಡೂರು ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಅಂಚೆ. ... ಪಿರ್ಯಾದುದಾರರು

- ವಿರುದ್ಧ -

ಉಮೇಶ್ ಸಾಲಿಯಾನ್.,
ಪ್ರಾಯ 47 ವರ್ಷಗಳು,
ತಂದೆಃ ಬೋಉ ಸಾಲಿಯಾನ್,
ವಾಸಃ ಮುತ್ತೂರು ಮನೆ, ಅಂಜಾರು ಗ್ರಾಮ,
ಹಿರಿಯಡ್ಕ ಅಂಚೆ, ಉಡುಪಿ ತಾಲೂಕು ಮತ್ತು ಜಿಲ್ಲೆ. ... ಆರೋಪಿ

## ಆಪಾದನೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದ ಹಣದ ಮರುಪಾವತಿಯ ಸಲುವಾಗಿ ದಿಃ 25.02.2017 ರಂದು ರೂ. 45,000/- ಗಳಿಗೆ ಹೆಚ್.ಡಿ.ಎಫ್.ಸಿ. ಬ್ಯಾಂಕ್., ಉಡುಪಿ ಶಾಖೆ ಚೆಕ್ ಸಂಃ 000049 ನ್ನು ನೀಡಿದ್ದು, ಪಿರ್ಯಾದುದಾರರು ಅದನ್ನು ನಗದೀಕರಿಸಲು ವಿಜಯ ಬ್ಯಾಂಕ್, ನೀರೆ ಬೈಲೂರು ಶಾಖೆಗೆ ಹಾಜರುಪಡಿಸಿದ್ದು, ಆದರೆ 'Funds Insufficient' ಎಂಬ ವಿಷಯದಿಂದ ಚೆಕ್ಕು ಅಮಾನ್ಯಗೊಂಡಿದೆ ಎಂದು ಸದರಿ ಬ್ಯಾಂಕಿನವರು ದಿಃ 10.03.2017 ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಾರರು ದಿಃ 30.03.2017 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸನ್ನು ನೀವು ಸ್ವೀಕರಿಸದೇ

ಇದ್ದುದರಿಂದ ಅದು unclaimed ಎಂಬ ಹಿಂಬರಹದೊಂದಿಗೆ ದಿಃ 3-04-2017 ರಂದು ಹಿಂದಿರುಗಿ ಬಂದಿದ್ದು, ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.